(3)

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ**
**ಶ್ರೀ ಕೋಟ ಶ್ರೀನಿವಾಸ ಪೂಜಾರಿ ಇವರು ನಿಯಮ 330 ಎ ರಡಿ ಮಂಡಿಸಿರುವ ಸೂಚನೆಗೆ**
**ಸರ್ಕಾರದ ಹೇಳಿಕೆ**

**ಸೂಚನೆ :-**

ಕರ್ನಾಟಕ ರಾಜ್ಯದಲ್ಲಿ ಆರ್ಥಿಕವಾಗಿ ಹಿಂದುಳಿದ, ಬಡವರ, ಶೋಷಿತರ ಮಕ್ಕಳು ಶಿಕ್ಷಣದಿಂದ ವಂಚಿತರಾಗದೆ ಎಲ್ಲಾ ಮಕ್ಕಳಿಗೂ ಶಿಕ್ಷಣ ದೊರೆಯಬೇಕು ಎಂಬ ಸದುದ್ದೇಶದಿಂದ ಪ್ರಾರಂಭವಾದ ಸಂಸ್ಥೆಯೇ ಜನಸೇವಾ ಟ್ರಸ್ಟ್.

ಶಿಕ್ಷಣ ಸಂಸ್ಥೆಯಾದ ಜನಸೇವಾ ಟ್ರಸ್ಟ್ ಬೆಂಗಳೂರು ಈ ಸಂಸ್ಥೆಗೆ ದಕ್ಷಿಣ ತಾಲ್ಲೂಕಿನ ಕುರುಬರಹಳ್ಳಿ ಗ್ರಾಮದ ತಾವರೆಕೆರೆ ಹೋಬಳಿಯಲ್ಲಿ ಹಿಂದಿನ ಸರ್ಕಾರದಲ್ಲಿ 35 ಎಕರೆ 33 ಗುಂಟೆ ಜಮೀನನ್ನು ಮಂಜೂರು ಮಾಡಿದ್ದು, ಪ್ರಸ್ತುತ ಹೊಸ ಸರ್ಕಾರ ಬಂದ ಮೇಲೆ ಸದರಿ ಆದೇಶಕ್ಕೆ ಸರ್ಕಾರ ತಡೆ ನೀಡಿದೆ. ಜನಸೇವಾ ಟ್ರಸ್ಟ್‌ಗೆ ಶೈಕ್ಷಣಿಕ ಸೇವಾ ಚಟುವಟಿಕೆಗಳ ಉದ್ದೇಶಕ್ಕಾಗಿ ಸದರಿ ಜಮೀನನ್ನು ಮಂಜೂರು ಮಾಡಿದ್ದರೂ ಸಹ ಜನಸೇವಾ ಟ್ರಸ್ಟ್ ಆರ್.ಎಸ್.ಎಸ್.ನ ಅಂಗಸಂಸ್ಥೆ ಎಂಬ ಒಂದೇ ಕಾರಣಕ್ಕೆ ಮಂಜೂರು ಮಾಡಿದ್ದ ಜಮೀನು ಹಂಚಿಕೆಗೆ ತಡೆ ನೀಡಿರುವುದು ಖಂಡನೀಯ, ಎಲ್ಲಾ ಜಾತಿ ವರ್ಗಗಳೂ ಸೇರಿದಂತೆ ಹಿಂದೂ ಧರ್ಮದ ಬಹುತೇಕ ಬಡವರ ಮಕ್ಕಳು ಕಲಿಯುತ್ತಿರುವ ಶಿಕ್ಷಣ ಸಂಸ್ಥೆ ಸಿದ್ಧವಾಗಲಿದೆ ಎಂಬ ಒಂದೇ ಕಾರಣಕ್ಕೆ ಸೇಡಿನ ರಾಜಕಾರಣಕ್ಕಾಗಿ ಜನಸೇವಾ ಟ್ರಸ್ಟ್‌ಗೆ ನೀಡಿದ ಜಮೀನು ಮಂಜೂರಾತಿ ಆದೇಶಕ್ಕೆ ತಡೆ ನೀಡಿರುವ ಸರ್ಕಾದ ಆದೇಶವನ್ನು ತೀವ್ರವಾಗಿ ಖಂಡಿಸಿ ಈ ಕೂಡಲೇ ದುರುದ್ದೇಶದಿಂದ ಕೂಡಿರುವ ಈ ಆದೇಶವನ್ನು ಹಿಂದಕ್ಕೆ ಪಡೆಯಬೇಕು.

**ಹೇಳಿಕೆ:-**

ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಕುರುಬರಹಳ್ಳಿ ಗ್ರಾಮದ ಸ.ನಂ.89ರಲ್ಲಿ 40-20 ಎಕರೆ/ಗುಂಟೆ ಗೋಮಾಳ ಜಮೀನಿನ ಪೈಕಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ 15-00 ಎಕರೆ/ಗುಂಟೆ ಜಮೀನನ್ನು ಮತ್ತು ಆಶ್ರಯ ಯೋಜನೆಗೆ 2-00 ಎಕರೆ ಜಮೀನು ಒಟ್ಟು 17-00 ಎಕರೆ ಜಮೀನುಗಳನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಮತ್ತು ಆಶ್ರಯ ಯೋಜನೆಗಳಿಗೆ ಕಾಯ್ದಿರಿಸಿಲಾಗಿರುತ್ತದೆ. ಸದರಿ 17-00 ಎಕರೆ ಜಮೀನು ಕಾಯ್ದಿರಿಸಿರುವುದನ್ನು ರದ್ದುಪಡಿಸಿ, ಉಳಿದ ಖುಲ್ಲಾ 18-33 ಎಕರೆ/ಗುಂಟೆ ಜಮೀನು ಸೇರಿದಂತೆ ಒಟ್ಟು 35-33 ಎಕರೆ/ಗುಂಟೆ ಜಮೀನಿನ ಪೈಕಿ 25-00 ಎಕರೆ "ಗೋಮಾಳ" ಜಮೀನನ್ನು ಪ್ರಚಲಿತ ಮಾರ್ಗಸೂಚಿ ಮೌಲ್ಯದ ಶೇಕಡ 25ರಷ್ಟು ಹಾಗೂ ಇತರೆ ಶಾಸನಬದ್ಧ ಶುಲ್ಕಗಳನ್ನು ವಿಧಿಸಿ ಜನಸೇವಾ ಟ್ರಸ್ಟ್, ಬೆಂಗಳೂರು ಇವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ. 70 ಎಲ್.ಜಿ.ಬಿ. 2022, ದಿನಾಂಕ:13.09.2022ರಲ್ಲಿ ಮಂಜೂರು ಮಾಡಲಾಗಿರುತ್ತದೆ.

ಇದಲ್ಲದೆ, ಇದೇ ಗ್ರಾಮದ ಸ.ನಂ.89ರಲ್ಲಿ 10-33 ಎಕರೆ/ಗುಂಟೆ "ಗೋಮಾಳ" ಜಮೀನನ್ನು ಜನಸೇವಾ ಟ್ರಸ್ಟ್, ಬೆಂಗಳೂರು ಇವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಕರ್ನಾಟಕ ಭೂ ಮಂಜೂರಾತಿ

ನಿಯಮಗಳು, 1969ರ ನಿಯಮ 22ಎ(1)(i)(2) ರನ್ವಯ ಕೃಷಿಯೇತರ ಜಮೀನಿನ ಪ್ರಚಲಿತ ಮಾರುಕಟ್ಟೆ ಮೌಲ್ಯ ಹಾಗೂ ಇತರೆ ಶಾಸನಬದ್ಧ ಶುಲ್ಕಗಳನ್ನು ವಿಧಿಸಿ ಜನಸೇವಾ ಟ್ರಸ್ಟ್, ಬೆಂಗಳೂರು ಇವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ. 70 ಎಲ್.ಜಿ.ಬಿ. 2022, ದಿನಾಂಕ: 16.03.2023ರಲ್ಲಿ ಮಂಜೂರು ಮಾಡಲಾಗಿರುತ್ತದೆ.

ಮೇಲ್ಕಂಡ ಎರಡೂ ಆದೇಶಗಳಲ್ಲಿ ಕೃಷಿಯೇತರ ಜಮೀನಿನ ಪ್ರಚಲಿತ ಮಾರುಕಟ್ಟೆ ಮೌಲ್ಯ ವಿಧಿಸಿರುವುದನ್ನು ಸಡಿಲಿಸಿ, ಸದರಿ ಜಮೀನುಗಳ ಪ್ರಚಲಿತ ಕೃಷಿಯೇತರ ಮಾರ್ಗಸೂಚಿ ಮೌಲ್ಯದ ಶೇಕಡ 5ರಷ್ಟು ಎಂದು ಪರಿಷ್ಕರಿಸಿ ಆದೇಶಿಸಲಾಗಿದೆ.

ಗೋಮಾಳ ಜಮೀನುಗಳ ಮಂಜೂರಾತಿ ಬಗ್ಗೆ, ಅನರ್ಹ ಸಂಸ್ಥೆಗಳಿಗೆ ನಿಯಮ ಮೀರಿ ಆಗಿರುವ ಜಮೀನು ಮಂಜೂರಾತಿಗಳ ಬಗ್ಗೆ, ಸರ್ಕಾರಕ್ಕೆ ದೂರುಗಳು ಬಂದಿದ್ದು, ಪ್ರಚಲಿತ ನಿಯಮಗಳ ಆಧಾರದ ಮೇಲೆ ಮಂಜೂರಾತಿ ಆಗಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವ ಪ್ರಕ್ರಿಯೆ ಸರ್ಕಾರದ ಪರಿಶೀಲನೆಯಲ್ಲಿದೆ. ಯಾವುದೇ ನಿರ್ದಿಷ್ಟ ಸಂಸ್ಥೆ ಬಗ್ಗೆ ಅಥವಾ ಅಂತಹ ಸಂಸ್ಥೆಗೆ ಮಂಜೂರಾಗಿರುವ ಜಮೀನಿನ ಬಗ್ಗೆ ಯಾವುದೇ ನಿರ್ದಿಷ್ಟ ಸೂಚನೆ ಇರುವುದಿಲ್ಲ. ಅರ್ಹತೆ, ಮಾನದಂಡ ಮತ್ತು ನಿಯಮಾವಳಿಗಳ ಆಧಾರದ ಮೇಲೆ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು.

**(ಸಂಖ್ಯೆ: ಆರ್‌ಡಿ 91 ಎಲ್‌ಜಿಕ್ಯೂ 2023)**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು